## ನಮ್ಮೊಡನೆ

# ಕೊಳಕು ಪಿಚ್‌ನ ಆಟ

**‘ಸಭ್ಯರ** ಕ್ರೀಡೆ’ ಎಂದು ಹೆಸರಾದ ಕ್ರಿಕೆಟ್‌ಗೆ ಕಾರ್ಪೊರೇಟ್ ಸ್ವರೂಪ ಬಂದ ಮೇಲೆ ಅದಕ್ಕೆ ವ್ಯವಹಾರ ಜಗತ್ತಿನ ಎಲ್ಲ ಆಯಾಮಗಳೂ ಸೇರಿಕೊಂಡಿವೆ. ವೈಯಕ್ತಿಕ ಸಾಧನೆ ಮತ್ತು ಸಂಘಟಿತ ಪ್ರಯತ್ನಗಳೇ ತಂಡಕ್ಕೆ ಯಶಸ್ಸು ತರುವ ಅಂಶಗಳು ಎಂಬುದು ಕ್ರಿಕೆಟ್ ಆಟ ಕುರಿತಾದ ಸ್ಥೂಲ ವ್ಯಾಖ್ಯಾನ. ಆದರೆ ಇವತ್ತು ಕ್ರಿಕೆಟ್ ಅನ್ನುವುದು ಕೋಟಿಗಟ್ಟಳೆ ಹಣ ಹರಿಯುತ್ತಿರುವ ಕ್ರೀಡಾ ಕ್ಷೇತ್ರ. ಹಣ, ಪ್ರತಿಷ್ಠೆ, ಪ್ರಚಾರದ ಪ್ರಭಾವಳಿಯ ಕಾರಣ ಆಟಗಾರರೂ ಬೆಳ್ಳಿತೆರೆಯ ತಾರೆಗಳಂತೆ ಕ್ರಿಕೆಟ್ ಗೀಳಿನ ಯುವಜನರಿಗೆ ಆರಾಧ್ಯ ದೈವಗಳು.

ಕ್ರಿಕೆಟ್ ಆಟಗಾರರಿಗೆ ಸಿಗುತ್ತಿರುವ ಮಾನ್ಯತೆ ಮತ್ತು ಪ್ರಚಾರದ ಲಾಭ ಪಡೆಯುವುದರಲ್ಲಿ ಯಾವತ್ತೂ ಹಿಂದೆ ಬೀಳದ ಉದ್ಯಮ ವಲಯ ಅದನ್ನೂ ಈಗ ಒಂದು ಬಂಡವಾಳ ಹೂಡಿಕೆಯ ಕ್ಷೇತ್ರವನ್ನಾಗಿ ಪರಿವರ್ತಿಸಿಕೊಂಡಿದೆ. ಕ್ರಿಕೆಟ್ ಆಟದ ಬಗ್ಗೆ ಜನ ತೋರುತ್ತಿರುವ ಉನ್ಮಾದ ಸದೃಶ ಗೀಳಿನ ಪರಿಣಾಮವಾಗಿ ಮಸಾಲೆ ಚಿತ್ರಗಳನ್ನು ನಿರ್ಮಿಸುವ ಸಿನಿಮಾ ತಂತ್ರವನ್ನು ಮೀರಿಸುವ ಪರಿವರ್ತನೆಗಳು ಕ್ರಿಕೆಟ್ ಆಟದಲ್ಲಿ ಆಗಿವೆ. ಏಕದಿನದ ಕ್ರಿಕೆಟ್ ಮತ್ತು ಒಂದು ದಿನವೂ ಕಾಯುವ ತಾಳ್ಮೆ ಇಲ್ಲದವರಿಗಾಗಿ ಇಪ್ಪತ್ತು ಓವರುಗಳ ಚುಟುಕು ಕ್ರಿಕೆಟ್ (ಟ್ವೆಂಟಿ ಟ್ವೆಂಟಿ) ಜನಪ್ರಿಯತೆ ಗಳಿಸಿವೆ. ಒಟ್ಟಾರೆ ಆಟದ ಬಗ್ಗೆ ಹೆಚ್ಚುತ್ತಿರುವ ಹುಚ್ಚಿನ ಕಾರಣ, ಕ್ರಿಕೆಟ್‌ನ ಈ ಅವತಾರಗಳೆಲ್ಲ ಜಾಗತಿಕ ಮನ್ನಣೆ ಪಡೆದುಕೊಂಡಿವೆ. ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಲಿ (ಐಸಿಸಿ) ಆಟಗಾರರ ವೈಯಕ್ತಿಕ ಸಾಧನೆ, ತಂಡಗಳ ಗೆಲುವಿನ ಪ್ರಮಾಣ ಅವಲಂಬಿಸಿ ರ್‍ಯಾಂಕಿಂಗ್ ನೀಡುವ ಪದ್ಧತಿಯನ್ನು ಜಾರಿಗೆ ತಂದು ಆಟದಲ್ಲಿನ ಜೂಜಿನ ಸ್ವರೂಪಕ್ಕೆ ಪರೋಕ್ಷ ಮುದ್ರೆಯನ್ನು ಒತ್ತಿ ಬಿಟ್ಟಿದೆ.

ಆದ್ದರಿಂದಲೇ ಪ್ರತಿ ಟೂರ್ನ್‌ಮೆಂಟಿನ ಬಗ್ಗೆಯೂ ಅಭಿಮಾನಿಗಳಲ್ಲಿ ಮುಗಿಲು ಮುಟ್ಟಿದ ನಿರೀಕ್ಷೆ. ಐಸಿಸಿ ರ್‍ಯಾಂಕಿಂಗ್ ಪ್ರಕಾರ ಟೆಸ್ಟ್ ಕ್ರಿಕೆಟ್‌ನಲ್ಲಿ ಅಗ್ರಸ್ಥಾನ, ಏಕದಿನದ ಕ್ರಿಕೆಟ್‌ನಲ್ಲಿ ಎರಡನೇ ಸ್ಥಾನ ಪಡೆದ ಹೆಗ್ಗಳಿಕೆಯ ಭಾರತ ತಂಡ ಈಚಿನ ಎರಡು ವರ್ಷಗಳಲ್ಲಿ ಚುಟುಕು (ಟ್ವೆಂಟಿ ಟ್ವೆಂಟಿ) ಕ್ರಿಕೆಟ್‌ನಲ್ಲಿ ಎಂಟರ ಘಟ್ಟದಲ್ಲಿಯೇ ಹೀನಾಯ ಸ್ಥಿತಿ ತಲುಪಿರುವುದು ಅಭಿಮಾನಿಗಳಲ್ಲಿ ಆಘಾತ ತಂದಿದೆ. ಚುಟುಕು ಕ್ರಿಕೆಟ್‌ನಲ್ಲಿಯೂ ಕೋಟ್ಯಂತರ ರೂಪಾಯಿ ದುಡಿಯುವುದು ಸಾಧ್ಯವೆಂಬ ಪರಿಕಲ್ಪನೆಯಲ್ಲಿ ಅವತಾರ ಎತ್ತಿದ ಇಂಡಿಯನ್ ಪ್ರೀಮಿಯರ್ ಲೀಗ್‌ನ ಟ್ವೆಂಟಿ ಟ್ವೆಂಟಿ ಚುಟುಕು ಕ್ರಿಕೆಟ್‌ನಲ್ಲಿ ಕೋಟಿಗಟ್ಟಲೆ ರೂಪಾಯಿಗೆ ‘ಮಾರಾಟವಾಗಿದ್ದ’ ಮಹೇಂದ್ರಸಿಂಗ್ ದೋನಿಯಂಥ ಆಟಗಾರರು ದೇಶವನ್ನು ಪ್ರತಿನಿಧಿಸುವ ಸಂದರ್ಭದಲ್ಲಿ ಕಳಪೆ ಪ್ರದರ್ಶನ ನೀಡಿ ದೇಶದ ತಂಡ ನೆಲ ಕಚ್ಚುವಂತಾಗಿದ್ದು ಕ್ರಿಕೆಟ್ ಆಟದ ಗೀಳನ್ನು ಹಚ್ಚಿಕೊಂಡ ಕೋಟ್ಯಂತರ ಅಭಿಮಾನಿಗಳನ್ನು ಕೆರಳಿಸಿದೆ. ಪ್ರತಿ ಆಟಗಾರ ಸಾಧನೆಯನ್ನೂ ಆದರ್ಶವಾಗಿ ಪರಿಗಣಿಸಿ ಆತನ ಮಾರುಕಟ್ಟೆ ಮೌಲ್ಯವನ್ನು ಹೆಚ್ಚಿಸುತ್ತಿದ್ದ ಅಭಿಮಾನಿಗಳು ತಾವಿಟ್ಟ ನಂಬಿಕೆಗೆ ದ್ರೋಹವಾಗಿದೆ ಎಂದು ಪರಿತಪಿಸುವಂತಾಗಿದೆ.

‘ಐಪಿಎಲ್ ಪಂದ್ಯ ನಡೆಯುತ್ತಿದ್ದ ಅವಧಿಯಲ್ಲಿ ಆಟಗಾರರು ರಾತ್ರಿ ಪಾರ್ಟಿಯಲ್ಲಿ ಸಮಯ ಕಳೆಯಬೇಕಿದ್ದರಿಂದ ಟ್ವೆಂಟಿ ಟ್ವೆಂಟಿ ವಿಶ್ವಕಪ್‌ನಲ್ಲಿ ಚೆನ್ನಾಗಿ ಆಡಲಾಗಲಿಲ್ಲ!’ ಎಂಬ ಕ್ಯಾಪ್ಟನ್ ಮಹೇಂದ್ರಸಿಂಗ್ ದೋನಿ ಕೊಟ್ಟಿರುವ ಸಬೂಬು ನಾಚಿಕೆಗೇಡಿನದು. ಹರಾಜಿಗೆ ಒಪ್ಪಿಸಿಕೊಂಡ ಕ್ಷಣದಿಂದಲೇ ಐಪಿಎಲ್ ನಿರ್ವಹಣೆಯ ವ್ಯಾಪಾರಿ ಸೂತ್ರಕ್ಕೆ ಬದ್ಧವಾಗಿ ತಮ್ಮ ಆಯ್ಕೆಯ ಸ್ವಾತಂತ್ರ್ಯ ಕಳೆದುಕೊಂಡ ಆಟಗಾರರು ತಮ್ಮ ಆಡುವ ಸಾಮರ್ಥ್ಯ ಕಾಯ್ದುಕೊಳ್ಳುವ ಎಚ್ಚರಿಕೆ ಪ್ರದರ್ಶಿಸದಿರುವುದು ಅಕ್ಷಮ್ಯ ನಡವಳಿಕೆ. ನೃತ್ಯ ಮಾಡಲಾಗದವರಿಗೆ ನೆಲ ನೆಟ್ಟಗಿಲ್ಲ ಎಂಬ ನೆಪವನ್ನು ನೆನಪಿಸುವಂತಿದೆ ಈ ಸಮರ್ಥನೆ.

ಕ್ರಿಕೆಟ್ ಅಂದರೆ ಶಿಸ್ತು ಎಂಬ ಹಳೆಯ ಮಾತು ಈಗ ಕಣ್ಮರೆಯಾಗಿದೆ. ‘ಹಣ, ಹೆಣ್ಣು, ಹೆಂಡ ಇಲ್ಲದೆ ಕ್ರಿಕೆಟ್ ಪಂದ್ಯ ಇಲ್ಲ’ ಎಂಬಂತಹ ಕೊಳಕು ವಾತಾವರಣ ನಿರ್ಮಾಣವಾಗಿದೆ. ಕ್ರಿಕೆಟ್ ಮಂಡಳಿಗಳ ಆಡಳಿತಗಾರರಿಗೂ ಈ ಬಗ್ಗೆ ವಿಷಾದ ಇದ್ದಂತಿಲ್ಲ. ಪಿಚ್ ತುಂಬಾ ಕೊಳಕು ಕಾಣಿಸುತ್ತಿದೆ. ಸ್ವಚ್ಛಗೊಳಿಸುವವರು ಯಾರು?

■ ಲಕ್ಷ್ಮಣ ಕೊಡಸೆ

‘ಐಪಿಎಲ್ ಪಂದ್ಯ ನಡೆಯುತ್ತಿದ್ದ ಅವಧಿಯಲ್ಲಿ ಆಟಗಾರರು ರಾತ್ರಿ ಪಾರ್ಟಿಯಲ್ಲಿ ಸಮಯ ಕಳೆಯಬೇಕಿದ್ದರಿಂದ ಟ್ವೆಂಟಿ ಟ್ವೆಂಟಿ ವಿಶ್ವಕಪ್‌ನಲ್ಲಿ ಚೆನ್ನಾಗಿ ಆಡಲಾಗಲಿಲ್ಲ!’ ಎಂಬ ಕ್ಯಾಪ್ಟನ್ ಮಹೇಂದ್ರಸಿಂಗ್ ದೋನಿ ಕೊಟ್ಟಿರುವ ಸಬೂಬು ನಾಚಿಕೆಗೇಡಿನದು. ಹರಾಜಿಗೆ ಒಪ್ಪಿಸಿಕೊಂಡ ಕ್ಷಣದಿಂದಲೇ ಐಪಿಎಲ್ ನಿರ್ವಹಣೆಯ ವ್ಯಾಪಾರಿ ಸೂತ್ರಕ್ಕೆ ಬದ್ಧವಾಗಿ ತಮ್ಮ ಆಯ್ಕೆಯ ಸ್ವಾತಂತ್ರ್ಯ ಕಳೆದುಕೊಂಡ ಆಟಗಾರರು ತಮ್ಮ ಆಡುವ ಸಾಮರ್ಥ್ಯ ಕಾಯ್ದುಕೊಳ್ಳುವ ಎಚ್ಚರಿಕೆ ಪ್ರದರ್ಶಿಸದಿರುವುದು ಅಕ್ಷಮ್ಯ ನಡವಳಿಕೆ.

